ಕರ್ನಾಟಕ ಸರ್ಕಾರ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 9154/2021**

ಹೆಸರು : ಶಾಂತವ್ವ

ಗಂಡನ ಹೆಸರು : ಸುಶೀಲ್ ಕುಮಾರ್

ವಯಸ್ಸು : 33

ಉದ್ಯೋಗ : ಪೋಲಿಸ್ ಉಪ ನಿರೀಕ್ಷಕರು

ವಾಸ : ಟಿಟಿ ಆರ್ ಎಸ್ ಐ ಹೆಗ್ಡೆ ನಗರ.

CW-15, PW-6

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 25.01.2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದ:**

1. ನಾನು 2019 ರಿಂದ 2022 ರವರೆಗೆ ಬಾಗಲೂರು ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.13.08.2021 ರಂದು ಯಲಹಂಕ ಸರ್ಕಾರಿ ಆಸ್ಪತ್ರೆಯಿಂದ ಮೃತ ವ್ಯಕ್ತಿಯ ಬಗ್ಗೆ ಮಾಹಿತಿ ಬಂದಿದ್ದು ಸದರಿ ಮೃತ ದೇಹವನ್ನು ಈಸ್ಟ್ ಪಾಂಟ್ ಆಸ್ಪತ್ರೆಯಲ್ಲಿ ಇಟ್ಟುಕೊಳ್ಳುವಂತೆ ಚಾಸಾ-13 ರವರ ಮೂಲಕ ಮನವಿಯನ್ನು ಸಲ್ಲಿಸಿರುತ್ತೇನೆ. ದಿ:14.08.2021 ರಂದು ಸಂಜೆ 06.30 ಗಂಟೆ ಸುಮಾರಿಗೆ ಮೃತ ವ್ಯಕ್ತಿಯ ತಮ್ಮ ಚಾಸಾ-1 ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ಸಂಖ್ಯೆ.142/2021 ರಂತೆ ಪ್ರಕರಣವನ್ನು ದಾಖಲಿಸಿ ಪ್ರ ವ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಪ್ರ ವ ವರದಿಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ದಿ:15.08.2021 ರಂದು ಈಸ್ಟ ಪಾಂಟ್ ಆಸ್ಪತ್ರೆಗೆ ಬೇಟಿ ನೀಡಿ ಚಾಸಾ-6 ರಿಂದ 8 ರವರಿಗೆ ನೋಟಿಸ್ ನೀಡಿ ನಿಪಿ-5 ರಂತೆ ಶವ ತನಿಖಾ ವರದಿಯನ್ನು ತಯಾರು ಮಾಡಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈಸ್ಟ್ ಪಾಂಟ್ ಆಸ್ಪತ್ರೆಗೆ ನಾನು ನೀಡಿದ್ದ ಮನವಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ನಂತರ ಶವ ಪರೀಕ್ಷೆಯನ್ನು ನೆಡೆಸುವ ಸಲುವಾಗಿ ವೈದ್ಯಾಧಿಕಾರಿಗಳಿಗೆ ಮನವಿ ಪತ್ರವನ್ನು ನೀಡಿರುತ್ತೇನೆ. ಶವ ತಿನಿಖಾ ಸಮಯದಲ್ಲಿ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಆ ಸಂದರ್ಬದಲ್ಲಿ ಸಹಾಯಕರಾಗಿದ್ದ ಚಾಸಾ-14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಾನು ವೈದ್ಯರಿಗೆ ಸಲ್ಲಿಸಿದ್ದ ಮನವಿ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಶವ ಪರೀಕ್ಷೆ ಆದ ನಂತರ ಮೃತ ದೇಹವನ್ನು ಸ್ವೀಕರಿಸಿ ಅದನ್ನು ಚಾಸಾ-1 ರವರಿಗೆ ಹಸ್ತಾಂತರಿಸಿರುತ್ತೇನೆ. ಆ ಸಂದರ್ಬದಲ್ಲಿ ತಯಾರಿಸಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಮೃತ ದೇಹ ಸ್ವೀಕೃತಿ ಪತ್ರವನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಆ ಸಂದರ್ಬದಲ್ಲಿ ತೆಗೆದ ಪೋಟೋವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಅದೇ ದಿನ ಸ್ಥಳಕ್ಕೆ ಬೇಟಿ ನೀಡಿ ಚಾಸಾ-9 ಮತ್ತು 10 ರವರ ಸಮಕ್ಷಮದಲ್ಲಿ ಚಾಸಾ-2 ರವರು ತೋರಿಸಿದ ಸ್ಥಳವನ್ನು ಪರಿಶೀಲನೆ ಮಾಡಿ ನಿಪಿ-2 ರಂತೆ ಮಹಜರ್ ಬರೆದಿರುತ್ತೇನೆ. ಆ ಸಂದರ್ಬದಲ್ಲಿ ಅಲ್ಯೂಮೀನಿಯಮ್ ಮಟ್ ಕೋಲ್ ನ್ನು ಸ್ವಾದೀನ ಪಡಿಸಿರುತ್ತೇನೆ ಹಾಗೂ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ನಿಪಿ-2

ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. 4 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಪಿ-16 ರಿಂದ 19 ಎಂದು ಗುರುತಿಸಲಾಯಿತು. ಮಟ್ ಕೋಲ್ ನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ನಿಪಿ-3 ಮತ್ತು 4 ರಂತೆ ಪಡೆದುಕೊಂಡಿರುತ್ತೇನೆ. ದಿ:16.08.2021 ರಂದು ಘಟನಾ ಸ್ಥಳದಲ್ಲಿ ಇದ್ದ ಚಾಸಾ-3 ಮತ್ತು 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ:28.08.2021 ರಂದು ಚಾಸಾ-11 ರವರಿಂದ ನಿಪಿ-6 ಶವ ಪರೀಕ್ಷ ವರದಿಯನ್ನು ಪಡೆದು ಕಡತಕ್ಕೆ ಲಗತ್ತಿಸಿಕೊಂಡಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ದಿ:31.08.2021 ರಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅಂದರೆ ಚಾಸಾ-12 ರವರಿಗೆ ಮಾಹಿತಿ ನೀಡಲು ನಿಪಿ-7 ರಂತೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿ:02.09.2021 ರಂದು ಆರೋಪಿತರನ್ನು ಠಾಣೆಗೆ ತಂದು ಹಾಜರು ಪಡಿಸುವಂತೆ ಚಾಸಾ-14 ರವರಿಗೆ ಆದೇಶಿಸಿದ್ದು, ಅದೇ ದಿನ ಆರೋಪಿಗಳನ್ನು ಚಾಸಾ-14 ರವರು ನನ್ನ ಮುಂದೆ ಹಾಜರು ಪಡಿಸಿದ್ದು ಅವರನ್ನು ವಿಚಾರಣೆ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ದಿ:28.09.2021 ರಂದು ಚಾಸಾ-12 ರವರು ನೀಡಿದ್ದ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ನಿಪಿ-8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ದ ಸಾಕಷ್ಟು ಸಾಕ್ಷಧಾರಗಳಿದ್ದ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು ಶ್ರೀ.**ಎಸ್ ಜಿ ಎಸ್ **ಆರೋಪಿ ಪರ ವಕೀಲರಿಂದ**

1. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಂತೆ ನಾನು ಯಾವುದೇ ವರದಿ ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಯಾವುದೇ ವರದಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯರಿಗೆ ಮನವಿ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಶವ ತನಿಖೆಯನ್ನು ಆಸ್ಪತ್ರೆಯಲ್ಲಿ ನೆಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ದೇಹವನ್ನು ಚಾಸಾ-1 ರವರಿಗೆ ಹಸ್ತಾಂತರಿಸಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೊಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-10 ಮತ್ತು 11 ರವರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಸ್ವೀಕೃತಿ ಪತ್ರ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವರದಿಯನ್ನು ಪೋಲಿಸ್ ಠಾಣೆಯಲ್ಲಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**